

ಬಾನುಲಿ ಪ್ರಸಾರ ಕೈಪಿಡಿ
ಕೇಳಿ-ಕಲಿ ಕಾರ್ಯಕ್ರಮ
ನೇಯ ತರಗತಿಯ ಮಕ್ಕಳಿಗಾಗಿ
2001-02
ಾರವಾಡ-ಗುಲಬರ್ಗಾ ಬಾನುಲಿ ಕೇಂದ್ರಗಳಿಂದ
ಏಕಕಾಲಕ್ಕೆ ಪ್ರಸಾರ
ಕಾರ್ಯಕ್ರಮದ ಪ್ರಾಯೋಜಕರು
ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ, ದೂರಶಿಕ್ಷಣ ಯೋಜನೆ
ರಾಜ್ಯ ಯೋಜನಾ ನಿರ್ದೇಶಕರ ಕಚೇರಿ, ಕರ್ನಾಟಕ, ಬೆಂಗಳೂರು
ಕಲಿ ನಲಿ
आकाशवाणी

# ಕೇಳಿ-ಕಲಿ ಬಾನುಲಿ ಕಾರ್ಯಕ್ರಮ

3/4 ನೆಯ ತರಗತಿ

ಪ್ರಸಾರ ವ್ಯಾಪ್ತಿ:

2001-02




ಮಕ್ಕಳ ಸಂಖ್ಯೆ

3ನೇ ತರಗತಿ: 5,07,545

4ನೇ ತರಗತಿ: 4,51,152

ಜಿಲ್ಲೆಗಳ ಸಂಖ್ಯೆ: 11.

ಶಾಲೆಗಳ ಸಂಖ್ಯೆ: 14,780

ಕೇಳಿ ಕಲಿ ಕಾರ್ಯಕ್ರಮದ ಸಾಪ್ತಾಹಿಕ ವೇಳಾಪಟ್ಟಿ (ಆಗಸ್ಟ್ 2001ರಿಂದ ಮಾರ್ಚ್ 2002)

| | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| ವೇಳೆ | 12.00-12.30 | 12.00-12.30 | 12.00-12.30 | 12.00-12.30 | 12.00-12.30 | 9.15-9.45 |
| 3ನೇ ತರಗತಿ | - | ಕನ್ನಡ | - | ಪರಿಸರ ವಿಜ್ಞಾನ | - | ಗಣಿತ |
| 4ನೇ ತರಗತಿ | ಕನ್ನಡ | - | ಗಣಿತ | - | ಪರಿಸರ ವಿಜ್ಞಾನ | |

ಸಂಖ್ಯೆ ಡಿಪಿಇಪಿ/ಡಿಇಪಿ/ಕೆ.ಕ.ಪ್ರಸಾರ/07/2001-02 ದಿನಾಂಕ: 08.11.2001

## ಸುತ್ತೋಲೆ

ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ ಮತ್ತು ದೂರಶಿಕ್ಷಣ ಯೋಜನೆಯ ಅಡಿಯಲ್ಲಿ ''ಕೇಳಿ-ಕಲಿ'' ಬಾನುಲಿ ಪ್ರಸಾರದ ಮೂರನೇ ಹಂತ ನೆರವೇರುತ್ತಿದೆ. ಈ ಹಂತದಲ್ಲಿ 3ನೇ ತರಗತಿಯ ಉತ್ತರ ಕರ್ನಾಟಕದ ಹನ್ನೊಂದು ಜಿಲ್ಲೆಗಳಲ್ಲಿ ಪ್ರಸಾರ ಪಡಿಸಲಾಗುತ್ತಿದೆ. ಈ ಕಾರ್ಯಕ್ರಮವು 14,780 ಶಾಲೆಗಳಲ್ಲಿಯ ಸುಮಾರು ಐದು ಲಕ್ಷ ವಿದ್ಯಾರ್ಥಿಗಳಿಗೆ ಮುಟ್ಟಲಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಡಿಪಿಇಪಿಯ 11 ಜಿಲ್ಲೆಗಳು, 76 ಬಿಇಓಗಳು, 76 ಬಿಆರ್ ಸಮನ್ವಯ ಅಧಿಕಾರಿಗಳು, ಸಿಆರ್‌ಸಿ ಸಮನ್ವಯ ಅಧಿಕಾರಿಗಳು, 17,780 ಮುಖ್ಯ ಶಿಕ್ಷಕರು ಹಾಗೂ ಮುಂತಾದ ಶಿಕ್ಷಕ/ಕಿಯರು ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕಾಗಿದೆ. ತಮ್ಮೆಲ್ಲರ ಯೋಜನಾಬದ್ಧ ಕಾರ್ಯನಿರ್ವಹಣೆಯ ಮೇಲೆ ಈ ಯೋಜನೆಯ ಯಶಸ್ಸು ಅವಲಂಬಿಸಿದೆ. ಕಾರಣ ತಮ್ಮೆಲ್ಲರ ಪಾಲ್ಗೊಳ್ಳುವಿಕೆಯನ್ನು ಬಯಸುತ್ತೇನೆ. ವಿಶೇಷವಾಗಿ ತಾವೆಲ್ಲರೂ ಈ ಕೆಳಗೆ ನಮೂದಿಸಿದ ಅಂಶಗಳ ಬಗ್ಗೆ ಗಮನವಹಿಸಬೇಕೆಂದು ಇಚ್ಛಿಸುತ್ತೇನೆ.

- ಶಾಲೆಯಲ್ಲಿ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರು, ಕೈಪಿಡಿಯ ಚೌಕಟ್ಟಿನಂತೆ ಶಾಲೆಯ ವೇಳಾಪಟ್ಟಿಯನ್ನು ಬದಲಾಯಿಸಿ, ಕೇಳುವ ಕೊಠಡಿ ಮತ್ತು ಇತರ ವ್ಯವಸ್ಥೆಯನ್ನು ಮುತುವರ್ಜಿ ವಹಿಸಿ ಮಾಡಬೇಕು.
- ಕಾರ್ಯಕ್ರಮ ಕೇಳುವ ವೇಳೆಯಲ್ಲಿ ಶಿಕ್ಷಣ ಸಂಯೋಜಕರು ಬಿಆರ್‌ಸಿ, ಸಿಆರ್‌ಸಿ ಸಂಪನ್ಮೂಲ ವ್ಯಕ್ತಿಗಳು, ಬಿಇಓ, ಇಓ, ಡಿಡಿಪಿಐ ಅಧಿಕಾರಿಗಳು ಸತತವಾಗಿ ಶಾಲೆಗಳಿಗೆ ಭೇಟಿ ನೀಡಿ ಸಕ್ರಿಯವಾಗಿ ಪಾಲ್ಗೊಂಡು ಪ್ರಕ್ರಿಯೆಯನ್ನು ದಾಖಲಿಸಬೇಕು ಹಾಗೂ ಎಲ್ಲರೂ ಭಾಗವಹಿಸುವಂತೆ ನೋಡಿಕೊಳ್ಳಬೇಕು.
- ಡಿವೈಪಿಸಿಗಳು ಮತ್ತು ಡಿಡಿಪಿಐ ಅಧಿಕಾರಿಗಳು ಕಾರ್ಯಕ್ರಮದ ಬಗ್ಗೆ ಪ್ರಸಾರ ಮಾಧ್ಯಮಗಳ ಸಹಾಯದಿಂದ ಜನಜಾಗೃತಿ ಮೂಡಿಸಬೇಕು. ಹಾಗೂ ಅಧಿಕಾರಿಗಳ ಸೇವಾನಿರತ ತರಬೇತಿಗಳಲ್ಲಿ ಇದರ ಬಗ್ಗೆ ಚರ್ಚಿಸಿ ಹೆಚ್ಚಿನ ಮಾಹಿತಿಯನ್ನು ನೀಡಬೇಕು.
- ಡಿಡಿಪಿಐ, ಡಿವೈಪಿಸಿ ಅಧಿಕಾರಿಗಳು ನಿಗದಿತ ನಮೂನೆಗಳನ್ನು ನಾಲ್ಕನೇ ತರಗತಿಯ ಶಿಕ್ಷಕ/ಕಿಯರಿಗೆ ಪೂರೈಸಿರುವಂತೆ ಮೂರನೇ ತರಗತಿಯ ಶಿಕ್ಷಕ/ಕಿಯರಿಗೆ ಮುದ್ರಣ ಸಾಮಗ್ರಿ ನಮೂನೆಗಳನ್ನು ಪ್ರತಿ ಶಾಲೆಗೆ ಪೂರೈಸುವುದು.
- ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಶಿಕ್ಷಕರು ಕೇಳುವ ಪಾಠದ ಬಗ್ಗೆ ಪ್ರತಿದಿನ ದಾಖಲಾತಿಯನ್ನು ಇಟ್ಟು ಅಂಕಿ ಸಂಖ್ಯೆಗಳನ್ನು ಕ್ರೋಢೀಕರಿಸಿ ಮೇಲಿನ ಅಧಿಕಾರಿಗಳಿಗೆ ಕಳುಹಿಸಿಕೊಡಬೇಕು.
- ಶಿಕ್ಷಕರು ಪ್ರಸಾರಪೂರ್ವ ಮತ್ತು ಪ್ರಸಾರೋತ್ತರ ಚಟುವಟಿಕೆಗಳನ್ನು ಮಾಡಬೇಕು.
- ಶಾಲೆಗಳಲ್ಲಿ ರೇಡಿಯೋಗಳನ್ನು ರಿಪೇರಿ ಮಾಡಿಸಲು, ಬ್ಯಾಟರಿ ಖರೀದಿಸಲು ಶಾಲಾ ಗ್ರ್ಯಾಂಟ್‌ನಿಂದ ಹಣ ಬಳಸಿಕೊಳ್ಳಬೇಕು.
- ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಆಸಕ್ತ ವ್ಯಕ್ತಿಗಳಿಂದ ಕಾರ್ಯಕ್ರಮಗಳ ಬಗ್ಗೆ ಅಭಿಪ್ರಾಯಗಳನ್ನು ಆಕಾಶವಾಣಿ ಗುಲಬರ್ಗಾ ಅಥವಾ ಧಾರವಾಡ ಕೇಂದ್ರಕ್ಕೆ ಮತ್ತು ಅಧಿಕಾರಿಗಳಿಗೆ ಬರೆದು ಕಾರ್ಯಕ್ರಮ ಸುಧಾರಿಸುವಲ್ಲಿ ಪಾಲ್ಗೊಳ್ಳಬೇಕು.

ಹಾರ್ದಿಕ ಶುಭಾಶಯಗಳು

ತಮ್ಮ

(ಲೂಕೋಸ್ ವಲ್ಲತ್ತೈ)

ರಾಜ್ಯ ಯೋಜನಾ ನಿರ್ದೇಶಕರು

ಡಿಡಿಪಿಐ, ..............................

ಪ್ರತಿಯನ್ನು: ಶ್ರೀ........ ಮು.ಶಾ.ಶಿ. ಮತ್ತು ಅಧ್ಯಕ್ಷರು ಡಿಐಸಿ,
ಇವರು ಸೂಕ್ತ ಕ್ರಮ ಕೈಗೊಳ್ಳಲು ಕೋರಿದೆ.

## ನವೆಂಬರ್ 3, 2001-ಮಾರ್ಚ್ 15, 2002ರವರೆಗೆ ಧಾರವಾಡ-ಗುಲಬರ್ಗಾ ಬಾನುಲಿ ಕೇಂದ್ರಗಳಿಂದ ಏಕಕಾಲಕ್ಕೆ ಪ್ರಸಾರವಾಗುವ 'ಕೇಳಿ-ಕಲಿ' ಬಾನುಲಿ ಕಾರ್ಯಕ್ರಮ-3ನೆಯ ತರಗತಿಯ ಮಕ್ಕಳಿಗೆ

ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವು ಪ್ರಾಥಮಿಕ ಶಿಕ್ಷಣದ ಗುಣಾತ್ಮಕ ಬದಲಾವಣೆಗೆ ಪ್ರಯತ್ನಿಸುತ್ತಿದೆ. ಸುಲಭವಾಗಿ ಲಭ್ಯವಿರುವ ಜನಪ್ರಿಯ ಮಾಧ್ಯಮಗಳನ್ನು ಶೈಕ್ಷಣಿಕ ಚಟುವಟಿಕೆಯಲ್ಲಿ ಕ್ರಿಯಾತ್ಮಕವಾಗಿ ಬಳಸಿಕೊಳ್ಳುವುದು ಇದರ ಉದ್ದೇಶಗಳಲ್ಲಿ ಒಂದು. ತರಗತಿಯಲ್ಲಿ ಪಠ್ಯಪುಸ್ತಕಗಳನ್ನು ಬೋಧಿಸುವುದರಜೊತೆಗೆ ಪೂರಕ ಮಾಹಿತಿಯನ್ನು ಬೇರೆ ಬೇರೆ ಮಾಧ್ಯಮಗಳ ಮೂಲಕ ನೀಡುವುದರಿಂದ ಕಲಿಕೆ ಗಟ್ಟಿಯಾಗುತ್ತದೆ.

3ನೆಯ ತರಗತಿಯ ವಿದ್ಯಾರ್ಥಿಗಳಿಗಾಗಿ ನವೆಂಬರ್ 14, 2000ರಿಂದ ಮಾರ್ಚ್ 16, 2001ರವರೆಗೆ ಗುಲಬರ್ಗಾ ಮತ್ತು ರಾಯಚೂರು ಆಕಾಶವಾಣಿಯಿಂದ ರೇಡಿಯೋ ಪ್ರಸಾರ ಮಾಡಲಾಯಿತು. ಈ ಕಾರ್ಯಕ್ರಮದ ಪ್ರಥಮ ಹಂತವಾಗಿ ಇದನ್ನು ಗುಲಬರ್ಗಾ ರಾಯಚೂರು ಎರಡು ಜಿಲ್ಲೆಗಳಿಗೆ ಸೀಮಿತ ಮಾಡಲಾಗಿತ್ತು. ಈ ಕಾರ್ಯಕ್ರಮದಿಂದ 3ನೇ ತರಗತಿಯ ವಿದ್ಯಾರ್ಥಿಗಳ ಹಾಜರಾತಿ, ಪಾಠದಲ್ಲಿ ಭಾಗವಹಿಸುವಿಕೆ ಹಾಗೂ ಸಾಧನಾಂಕ ಹೆಚ್ಚಳದಲ್ಲಿ ಗಣನೀಯ ಪರಿಣಾಮ ಕಂಡುಬಂದಿದೆ. ಇದರ ಯಶಸ್ಸನ್ನು ಆಧರಿಸಿ 2001-02ರಲ್ಲಿ 4ನೇ ತರಗತಿಗಾಗಿ ಎರಡನೇ ಹಂತದ ಕಾರ್ಯಕ್ರಮವನ್ನು ರೂಪಿಸಲಾಯಿತು. ಈ ಕಾರ್ಯಕ್ರಮ ಆಗಸ್ಟ್ 6, 2001ರಿಂದ ಫೆಬ್ರವರಿ 27, 2002ರವರೆಗೆ ಧಾರವಾಡ-ಗುಲಬರ್ಗಾ ಕೇಂದ್ರಗಳಿಂದ ಏಕಕಾಲಕ್ಕೆ ಪ್ರಸಾರವಾಗುತ್ತಿದೆ. ಈ ಕಾರ್ಯಕ್ರಮದ ಪ್ರಯೋಜನವನ್ನು ರಾಜ್ಯದ ಹನ್ನೊಂದು ಜಿಲ್ಲೆಗಳ ಸುಮಾರು 4,51,152 ವಿದ್ಯಾರ್ಥಿಗಳು ಪಡೆಯುತ್ತಿದ್ದಾರೆ. ಈ ಕಾರ್ಯಕ್ರಮದ ಯಶಸ್ಸಿನ ಹಾಗೂ ಸುಧಾರಣೆಗಳ ಬಗ್ಗೆ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ವಿಚಾರಗಳನ್ನು ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ರಾಜ್ಯ ಯೋಜನಾ ನಿರ್ದೇಶನಾಲಯವು ಫೋನ್-ಇನ್ ನೇರ ಕಾರ್ಯಕ್ರಮ, ಶಾಲೆಗಳಿಂದ ಬಂದ ಪತ್ರ, ಕಾರ್ಯಾಗಾರಗಳ ಮೂಲಕ ಪಡೆಯುತ್ತಲಿದೆ. ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಬೇಡಿಕೆಯ ಆಧಾರದ ಮೇಲೆ ಈಗ ಮೂರನೇ ಹಂತದ ಕಾರ್ಯಕ್ರಮವನ್ನು ಯೋಜಿಸಲಾಗಿದೆ. ಈ ಕಾರ್ಯಕ್ರಮ 3ನೇ ತರಗತಿಯ ಹನ್ನೊಂದು ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಉಪಯೋಗಕಾರಿಯಾಗುವಂತೆ ಮರುಪ್ರಸಾರ ಮಾಡಲಾಗುತ್ತಿದೆ.

ಈ ರೇಡಿಯೋ ಕಾರ್ಯಕ್ರಮವನ್ನು ಪಠ್ಯಪುಸ್ತಕಗಳಲ್ಲಿರುವ ಪಾಠಗಳಿಗೆ ಪೂರಕವಾಗಿ ರೂಪಿಸಲಾಗಿದೆ. ಪಠ್ಯಪುಸ್ತಕದಲ್ಲಿರುವ ಪಾಠಗಳ ಕಲಿಕೆಯ ಕನಿಷ್ಟ ಮಟ್ಟಕ್ಕಾಗಿ ಇರುವ ನಿರ್ದೇಶನಗಳಿಗನುಗುಣವಾಗಿ ತಯಾರಿಸಲಾಗಿದೆ. ರೇಡಿಯೋ ಕಾರ್ಯಕ್ರಮಕ್ಕೆ ಪಾಠವನ್ನು ತಯಾರಿಸುವಾಗ ಈ ಕಲಿಕೆಯ ಕನಿಷ್ಟ ಮಟ್ಟಗಳ ಅನ್ವಯ ಸಾಧಿಸಬೇಕಾದ ಸಾಮರ್ಥ್ಯಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ.

ವಿದ್ಯಾರ್ಥಿಗಳಿಗೆ ಪಠ್ಯದಲ್ಲಿ ಹಲವಾರು ಪರಿಕಲ್ಪನೆಗಳು, ಚಟುವಟಿಕೆಗಳು ಮತ್ತು ವಿವರಣೆಗಳನ್ನು ಸರಳವಾಗಿ ವಿವರಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಪರಿಕಲ್ಪನೆಯನ್ನು ಸರಳಗೊಳಿಸುವುದರ ಜೊತೆಗೆ ಜನಪ್ರಿಯ ಚೌಕಟ್ಟಿನಲ್ಲಿ ಗದ್ಯ, ಪದ್ಯ, ಸಂಗೀತ ಮತ್ತು ಧ್ವನಿ ಪರಿಣಾಮಗಳ ಮೂಲಕ ಸುಲಭಗ್ರಾಹ್ಯವಾಗುವಂತೆ ಮಾಡಲಾಗಿದೆ. ಇದರ ಜೊತೆಗೆ ನೇರ 'ಫೋನ್-ಇನ್' ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸಕ್ರಿಯವಾಗಿ ಭಾಗವಹಿಸುವಂತೆ ಯೋಜಿಸಿರುವುದೊಂದು ವಿಶೇಷ.

ಪಠ್ಯಕ್ರಮದ ಆಶಯಗಳನ್ನು ಗಮನದಲ್ಲಿಟ್ಟುಕೊಂಡು ರೂಪಿಸಲಾಗಿರುವ ಈ ಕಾರ್ಯಕ್ರಮದಲ್ಲಿ ಪಾಠಗಳೇ ಮೂಲ ಆಕರಗಳಲ್ಲ. ಈ ಕಾರ್ಯಕ್ರಮವು ತರಗತಿಯ ಬೋಧನೆಗೆ ಪರ್ಯಾಯವಲ್ಲ ಎಂಬುದನ್ನೂ ಶಿಕ್ಷಕರು ಗಮನಿಸಬೇಕು.

ಇಲ್ಲಿಯ ಪಾಠಗಳನ್ನು ಉತ್ತರ ಕರ್ನಾಟಕದ ಹನ್ನೊಂದು ಜಿಲ್ಲೆಗಳಲ್ಲಿ ಬಳಕೆಯಲ್ಲಿರುವ ಭಾಷೆಯ ಸೊಗಡು, ಉಚ್ಚಾರ, ಮಾತನಾಡುವ ರೀತಿ-ನೀತಿ, ಇತ್ಯಾದಿಗಳನ್ನು ಲಕ್ಷ್ಯದಲ್ಲಿರಿಸಿ ಯುಕ್ತ ಮಾರ್ಗದರ್ಶನದಲ್ಲಿ ರಚಿಸಲಾಗಿದೆ. ಈ ರೀತಿ ರಚಿಸುವಲ್ಲಿ ಈ ಭಾಗದ ಶಿಕ್ಷಕ-ಶಿಕ್ಷಕಿಯರೇ ಹೆಚ್ಚಾಗಿ ಪಾಲ್ಗೊಂಡಿದ್ದಾರೆ.

ಈ ಪಠ್ಯ ಕಾರ್ಯಕ್ರಮಗಳಿಗೆ ರೇಡಿಯೋ ಮಾಧ್ಯಮವನ್ನೇ ಏಕೆ ಆರಿಸಲಾಗಿದೆ?

- ಇದರ ವ್ಯಾಪ್ತಿ ದೊಡ್ಡದು
- ಕಡಿಮೆ ಖರ್ಚಿನಲ್ಲಾಗುತ್ತದೆ
- ಇದು ಸುಲಭ ಲಭ್ಯ
- ಮಾಹಿತಿಯನ್ನು ಶೀಘ್ರವಾಗಿ ತಲುಪಿಸಬಹುದು.
- ಹಳ್ಳಿ ಹಳ್ಳಿಗೆ ತಲುಪುವ ಮಾಧ್ಯಮ

**ಪ್ರಸಾರದ ವ್ಯಾಪ್ತಿ:**

ಜಿಲ್ಲೆಗಳ ಸಂಖ್ಯೆ - 11
ಶಾಲೆಗಳ ಸಂಖ್ಯೆ - 14780
3ನೆಯ ತರಗತಿ ಮಕ್ಕಳ ಸಂಖ್ಯೆ - 451152

**ಬಾನುಲಿ ಪ್ರಸಾರ:**

ಧಾರವಾಡ, ಗುಲ್ಬರ್ಗಾ ಆಕಾಶವಾಣಿ ಕೇಂದ್ರಗಳಿಂದ ಏಕಕಾಲಕ್ಕೆ ಈ ಕಾರ್ಯಕ್ರಮವು 3 ನವಂಬರ್ 2001ರಿಂದ ಮಾರ್ಚ್ 2002ರವರೆಗೆ ಬಿತ್ತರಗೊಳ್ಳಲಿದೆ. ಸರ್ಕಾರಿ ದಿನಗಳಂದು ಪ್ರಸಾರವಾಗುವುದಿಲ್ಲ.

ಡಿಇಪಿ-ಡಿಪಿಇಪಿ ಮತ್ತು ಆಕಾಶವಾಣಿ ಸಹಯೋಗದಲ್ಲಿ ತಯಾರಾಗಿರುವ ಈ ಕಾರ್ಯಕ್ರಮವು ತರಗತಿಯ ಪಠ್ಯ ವಿಷಯವನ್ನು ಸರಳಗೊಳಿಸಲು ಸಫಲವಾದರೆ, ನಮ್ಮ ಪ್ರಯತ್ನ ಸಾರ್ಥಕ. ಈ ಕಾರ್ಯಕ್ರಮದ ಬಗ್ಗೆ ಕೇಳುಗರ, ಶಿಕ್ಷಕರ ಸಲಹೆ ಸೂಚನೆಗಳಿಗೆ ಸ್ವಾಗತ.

**ಶಿಕ್ಷಕರಿಗೆ ಸೂಚನೆಗಳು:**

- ರೇಡಿಯೋ ಪಾಠಗಳು ಮಕ್ಕಳಿಗೆ ಸರಿಯಾಗಿ ಕೇಳಿಸುವಂತೆ ಶಾಲೆಯ ಕೊಠಡಿಯಲ್ಲಿ ಸೂಕ್ತ ವ್ಯವಸ್ಥೆಯನ್ನು ಶಿಕ್ಷಕರು ಕಲ್ಪಿಸಬೇಕು. ಸಾಧ್ಯವಿದ್ದೆಡೆ ಮಕ್ಕಳನ್ನು V ಆಕಾರದಲ್ಲಿ ಕೂಡಿಸಬೇಕು.
- ಪ್ರಸಾರವಾಗುವುದಕ್ಕೆ ಮೊದಲು ವಿದ್ಯಾರ್ಥಿಗಳನ್ನು ನಿಶ್ಯಬ್ದವಾಗಿ ಕೂಡಿಸಬೇಕು.
- ಪ್ರಸಾರವಾಗುವಾಗ ಯಾವುದೇ ಕಾರಣಕ್ಕೂ ಅಡಚಣೆ ಉಂಟು ಮಾಡದೆ, ಮಕ್ಕಳು ಕಾರ್ಯಕ್ರಮವನ್ನು ಆಸಕ್ತಿಯಿಂದ ಕೇಳಿಸಿಕೊಳ್ಳಲು ಅನುವು ಮಾಡಿಕೊಡಬೇಕು.
- ಪ್ರಸಾರವಾಗುವ ವಿಷಯವನ್ನು ಪೂರ್ವಭಾವಿಯಾಗಿ ಮಕ್ಕಳಿಗೆ ತಿಳಿಸಬೇಕು. ಇದಕ್ಕಾಗಿ ವೇಳಾಪಟ್ಟಿಯನ್ನು ಮುಂಗಡವಾಗಿ ಒದಗಿಸಿದೆ.
- ಪ್ರಸಾರದ ಪಾಠವನ್ನು ಪ್ರಸಾರವಾಗುವ ಪೂರ್ವದಲ್ಲಿಯೇ ಕಲಿಸಿರಬೇಕು.
- ಸೂಚಿಯಲ್ಲಿ ನೀಡಿದ ಪ್ರಸಾರಪೂರ್ವ ಚಟುವಟಿಕೆಗಳನ್ನು ಮಾಡಿಸಿರಬೇಕು.
- ಕಾರ್ಯಕ್ರಮ ಪ್ರಸಾರವಾಗುವ ಮೊದಲು ಅಂದಿನ ಪ್ರಸಾರದ ಪಾಠವನ್ನು ಕುರಿತು ಸಂಕ್ಷಿಪ್ತ ಮಾಹಿತಿಯನ್ನು ನೀಡಬೇಕು.
- ಮಕ್ಕಳು ಕಾರ್ಯಕ್ರಮ ಕೇಳಿಸಿಕೊಂಡ ನಂತರ ಪ್ರಸ್ತಾಪವಾದ ವಿಷಯಗಳ ಬಗ್ಗೆ ಸರಳವಾದ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಬೇಕು.
- ಪ್ರಸಾರೋತ್ತರ ಚಟುವಟಿಕೆಗಳನ್ನು ಮಾಡಿಸಿರಿ.
- ಕಾರ್ಯಕ್ರಮವನ್ನು ಆಲಿಸಿದ ನಂತರ ನಿಮ್ಮ ಅನಿಸಿಕೆಗಳನ್ನು ಧಾರವಾಡ/ಗುಲಬರ್ಗಾ ಆಕಾಶವಾಣಿ ಕೇಂದ್ರಕ್ಕೆ ತಿಳಿಸಿರಿ.
- ಕಾರ್ಯಕ್ರಮ ಕುರಿತು ಶಿಕ್ಷಕರ ಹಾಗೂ ಮಕ್ಕಳ ಅನಿಸಿಕೆಗಳನ್ನು ನೀಡಲಾಗಿರುವ/ನೀಡಲಿರುವ ಪ್ರಶ್ನಾವಳಿಗೆ ಉತ್ತರಿಸಿ ಸಂಬಂಧಪಟ್ಟ ಸಿಆರ್‌ಸಿ ಸಭೆಗಳಲ್ಲಿ ಚರ್ಚಿಸಿ ಸಂಯೋಜಕರಿಗೆ ಮಾಹಿತಿ ನೀಡಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲೆಯ ಡಿವೈಪಿಸಿ, ಸಂಬಂಧಿಸಿದ ಬಿಆರ್‌ಸಿ ಹಾಗೂ ಸಿಆರ್‌ಸಿಗಳನ್ನು ಸಂಪರ್ಕಿಸಿರಿ.

## ಪರಿಷ್ಕರಣ ಸಮಿತಿ

ಡಾ. ಬಿ. ಫಾಲಚಂದ್ರ, ದಿಲ್ಲಿ

ಶ್ರೀ ಎ.ಎಸ್. ರಾಮಚಂದ್ರರಾವ್, ಬೆಳಗಾವ

ಡಾ. ಏಕನಾಥ ಏಕಬೋಟೆ, ಗುಲಬರ್ಗಾ

ಶ್ರೀ ಸತೀಶ ಎಚ್.ಎಲ್., ಮೈಸೂರು

ಶ್ರೀ ಎಂ.ಆರ್. ಮಾಶಾಳಕರ, ಗುಲಬರ್ಗಾ

ಶ್ರೀ ಸತೀಶ ಪರ್ವತೀಕರ, ಗುಲಬರ್ಗಾ

ಶ್ರೀ ಎನ್.ವಿ. ರಮೇಶ, ರಾಯಚೂರು

ಶ್ರೀಮತಿ ಆರ್. ಮಂಜುಳಾ, ಧಾರವಾಡ

ಶ್ರೀ ಎಚ್.ಕೆ. ರಾಮನಾಥ, ಮೈಸೂರು

ದಿ. ಸಿಸು ಸಂಗಮೇಶ, ಬಿಜಾಪುರ

ಶ್ರೀ ಮುಷ್ತಾಕ್ ಅಹ್ಮದ್ ಪಟೇಲ್, ಬೆಂಗಳೂರು